# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 01 |
| ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ |
| ಉತ್ತರಿಸಬೇಕಾದ ದಿನಾಂಕ | : | 13-02-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ.ಜಾತಿ ಮತ್ತು ಪ.ವರ್ಗದ ಬಿಪಿಎಲ್ ಕಾರ್ಡ್‌ದಾರರಿಗೆ "ಅಮೃತ ಜ್ಯೋತಿ" ಯೋಜನೆಯನ್ನು ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ, ಜೆಸ್ಕಾಂ ಹಾಗೂ ಚೆಸ್ಕಾಂಗಳಲ್ಲಿ ಜಾರಿಗೊಳಿಸಲಾಗಿದೆಯೇ; | ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಬಿಪಿಎಲ್ ಕಾರ್ಡ್‌ದಾರರಿಗೆ "ಅಮೃತ ಜ್ಯೋತಿ" ಯೋಜನೆಯನ್ನು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಎನರ್ಜಿ 232 ಪಿಎಸ್ಆರ್ 2022 ಬೆಂಗಳೂರು ದಿನಾಂಕ 18.05.2022 ರ ಪ್ರಕಾರ 01.05.2022 ರಿಂದ ಅನ್ವಯವಾಗುವಂತೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಜಾರಿಗೊಳಿಸಲಾಗಿದೆ. |
| ಆ) | ಹಾಗಿದ್ದಲ್ಲಿ, ಈವರೆಗೆ ರಾಜ್ಯಾದ್ಯಂತ ಎಷ್ಟು ಮಂದಿ ಫಲಾನುಭವಿಗಳು ನೊಂದಾಯಿಸಿಕೊಂಡಿದ್ದಾರೆ; (ವಿಭಾಗವಾರು/ ಜಿಲ್ಲಾವಾರು ಮಾಹಿತಿಯನ್ನು ಪ್ರತ್ಯೇಕವಾಗಿ ನೀಡುವುದು) | ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಡಿಸೆಂಬರ್-2022 ಅಂತ್ಯಕ್ಕೆ ಅಮೃತ ಜ್ಯೋತಿ ಯೋಜನೆಯಡಿ ನೊಂದಣಿ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ. |
| ಇ) | ಸದರಿ ಯೋಜನೆಯಡಿಯಲ್ಲಿ ನೊಂದಾಯಿತರಿಗೆ ನೀಡುತ್ತಿರುವ ಸೌಲಭ್ಯಗಳಾವುವು; | ಈ ಯೋಜನೆಯಲ್ಲಿ ಗೃಹ ಬಳಕೆ ಮತ್ತು ಬಿ.ಜೆ/ಕೆ.ಜೆ ಪ್ರವರ್ಗದಲ್ಲಿ ವಿದ್ಯುತ್ ಬಳಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಬಿಪಿಎಲ್ ಕಾರ್ಡ್‌ದಾರರಿಗೆ ಮಾಸಿಕ ಗರಿಷ್ಠ 75 ಯೂನಿಟ್‌ಗಳವರೆಗಿನ ಬಳಕೆಗೆ ಉಚಿತವಾಗಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಹಾಗೆಯೇ ಸದರಿ ಯೋಜನೆಯ ಸಹಾಯ ಧನವನ್ನು ಸಂಬಂಧಪಟ್ಟ ಗ್ರಾಹಕರ ಬ್ಯಾಂಕ್ ಖಾತೆಗೆ ನೇರವಾಗಿ DBT ವ್ಯವಸ್ಥೆಯಡಿ ಜಮಾ ಮಾಡಲಾಗುತ್ತಿದೆ. |
| ಈ) | ಈ ಯೋಜನೆಯಡಿಯಲ್ಲಿ ಈವರೆಗೆ ಎಷ್ಟು ಫಲಾನುಭವಿಗಳಿಗೆ ಸಬ್ಸಿಡಿ ಹಣವನ್ನು ಬಿಡುಗಡೆಗೊಳಿಸಲಾಗಿದೆ; ಉಳಿಕೆ ಎಷ್ಟು ಫಲಾನುಭವಿಗಳಿಗೆ ಬಿಡುಗಡೆ ಮಾಡಬೇಕಾಗಿದೆ; (ವಿಭಾಗವಾರು/ ಜಿಲ್ಲಾವಾರು ಪ್ರತ್ಯೇಕ ಮಾಹಿತಿಯನ್ನು ನೀಡುವುದು) | ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಅಮೃತ ಜ್ಯೋತಿ ಯೋಜನೆಯಡಿಯಲ್ಲಿ ಈವರೆಗೆ ಸಬ್ಸಿಡಿ ಹಣ ಬಿಡುಗಡೆಗೊಳಿಸಲಾದ ಫಲಾನುಭವಿಗಳ ಹಾಗೂ ಸಬ್ಸಿಡಿ ಹಣ ಬಿಡುಗಡೆ ಮಾಡಬೇಕಾಗಿರುವ ಫಲಾನುಭವಿಗಳ ಸಂಖ್ಯೆಯ ಜಿಲ್ಲಾವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಉ) | ನೊಂದಾಯಿತ ಎಲ್ಲಾ ಪ.ಜಾತಿ ಮತ್ತು ಪ.ವರ್ಗದ ಬಿಪಿಎಲ್ ಕಾರ್ಡ್‌ದಾರರಿಗೆ ಸಬ್ಸಿಡಿ ಬಿಡುಗಡೆಗೊಳಿಸಲು ಸರ್ಕಾರವು ವಿಳಂಬ ನೀತಿಯನ್ನು ಅನುಸರಿಸಲು ಕಾರಣಗಳೇನು? (ವಿವರವನ್ನು ನೀಡುವುದು) | ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಅಮೃತ ಜ್ಯೋತಿ ಯೋಜನೆಯಡಿ ಜೂನ್, ಜುಲೈ ಮತ್ತು ಆಗಸ್ಟ್ 2022 ರ ಮಾಹೆಯವರೆವಿಗೂ ಸಹಾಯ ಧನದ ಮೊತ್ತವನ್ನು DBT ವ್ಯವಸ್ಥೆಯ ಮೂಲಕ ಅರ್ಹ ಫಲಾನುಭವಿಗಳಿಗೆ ಪಾವತಿಸಲಾಗಿರುತ್ತದೆ.<br><br>ಈ ಪ್ರವರ್ಗದ ಫಲಾನುಭವಿ/ಗ್ರಾಹಕರುಗಳು ಈ ಯೋಜನೆಯ ಸೌಲಭ್ಯಕ್ಕೆ ನೊಂದಾಯಿತಗೊಂಡಿದ್ದರು ಸಹ ದಿನಾಂಕ:30.04.2022ರ ಅಂತ್ಯಕ್ಕೆ ಪಾವತಿಸಬೇಕಾಗಿರುವ ವಿದ್ಯುತ್ ಶುಲ್ಕದ ಬಾಕಿ ಮೊತ್ತವನ್ನು ಪಾವತಿಸದೇ ಇರುವುದರಿಂದ ಹಾಗೂ ದಿನಾಂಕ:01.05.2022 ರಿಂದ ಮುಂದಿನ ಪ್ರತಿ ಮಾಹೆ ವಿತರಿಸುತ್ತಿರುವ ವಿದ್ಯುತ್ ಶುಲ್ಕದ ಬಿಲ್ಲುಗಳನ್ನು ಪಾವತಿಸದೇ ಇರುವುದರಿಂದ ಈ ಗ್ರಾಹಕರಿಗೆ ಸಬ್ಸಿಡಿ ಮೊತ್ತವನ್ನು ಬಿಡಗಡೆಗೊಳಿಸುವುದು ವಿಳಂಬವಾಗುತ್ತಿದೆ. |

ಸಂಖ್ಯೆ: ಎನರ್ಜಿ 34 ಇಬಿಎಸ್ 2023

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ.ಯು.ಬಿ.ವೆಂಕಟೇಶ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 01ಕ್ಕೆ ಅನುಬಂಧ-1

ರಾಜ್ಯಾದ್ಯಂತ ಪ.ಜಾತಿ ಮತ್ತು ಪ.ವರ್ಗದ ಬಿಪಿಎಲ್ ಕಾರ್ಡ್‌ದಾರರು ಅಮೃತ ಜ್ಯೋತಿ ಯೋಜನೆಯಡಿ ನೊಂದಾಯಿಸಿಕೊಂಡವರ ಫಲಾನುಭವಿಗಳ ಸಂಖ್ಯೆ ವಿವರಗಳು: (ಡಿಸೆಂಬರ್-2022ರ ಅಂತ್ಯಕ್ಕೆ)

| ಕಂಪನಿ | ಜಿಲ್ಲೆ | ಬಿಪಿಎಲ್ ಕಾರ್ಡ್‌ದಾರರು ಅಮೃತ ಜ್ಯೋತಿ ಯೋಜನೆಯಡಿ ನೊಂದಾಯಿಸಿಕೊಂಡವರ ಫಲಾನುಭವಿಗಳ ಸಂಖ್ಯೆ |
|---|---|---|
| ಬೆಸ್ಕಾಂ | ಬೆಂಗಳೂರು ನಗರ | 8514 |
| | ಕೋಲಾರ | 36896 |
| | ಚಿಕ್ಕಬಳ್ಳಾಪುರ | 21900 |
| | ಬೆಂಗಳೂರು ಗ್ರಾಮಾಂತರ | 19979 |
| | ರಾಮನಗರ | 25622 |
| | ತುಮಕೂರು | 57199 |
| | ಚಿತ್ರದುರ್ಗ | 53867 |
| | ದಾವಣಗೆರೆ | 46046 |
| | **ಬೆಸ್ಕಾಂ ಒಟ್ಟು** | **270023** |
| ಮೆಸ್ಕಾಂ | ದಕ್ಷಿಣ ಕನ್ನಡ | 12891 |
| | ಉಡುಪಿ | 8149 |
| | ಶಿವಮೊಗ್ಗ | 20288 |
| | ಚಿಕ್ಕಮಗಳೂರು | 12742 |
| | **ಮೆಸ್ಕಾಂ ಒಟ್ಟು** | **54070** |
| ಸೆಸ್ಕ್ | ಮೈಸೂರು | 79104 |
| | ಚಾಮರಾಜನಗರ | 43277 |
| | ಕೊಡಗು | 8512 |
| | ಮಂಡ್ಯ | 20892 |
| | ಹಾಸನ | 39309 |
| | **ಸೆಸ್ಕ್ ಒಟ್ಟು** | **191094** |
| ಹೆಸ್ಕಾಂ | ಬಾಗಲಕೋಟೆ | 30169 |
| | ಬೆಳಗಾವಿ | 59576 |
| | ಧಾರವಾಡ | 12403 |
| | ಗದಗ | 15705 |
| | ಹಾವೇರಿ | 22101 |
| | ಉತ್ತರ ಕನ್ನಡ | 11692 |
| | ವಿಜಯಪುರ | 19468 |
| | **ಹೆಸ್ಕಾಂ ಒಟ್ಟು** | **171114** |
| ಜೆಸ್ಕಾಂ | ಬಳ್ಳಾರಿ | 23009 |
| | ಬೀದರ್ | 36543 |
| | ಕಲಬುರಗಿ | 37605 |
| | ಕೊಪ್ಪಳ | 25606 |
| | ರಾಯಚೂರ್ | 24577 |
| | ವಿಜಯನಗರ | 29563 |
| | ಯಾದಗಿರಿ | 14621 |
| | **ಜೆಸ್ಕಾಂ ಒಟ್ಟು** | **191524** |
| | **ಒಟ್ಟು** | **877825** |

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ.ಯು.ಬಿ.ವೆಂಕಟೇಶ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 01ಕ್ಕೆ ಅನುಬಂಧ-2

**ರಾಜ್ಯಾದ್ಯಂತ ಪ.ಜಾತಿ ಮತ್ತು ಪ.ವರ್ಗದ ಬಿಪಿಎಲ್ ಕಾರ್ಡ್‌ದಾರರಿಗೆ ಅಮೃತ ಜ್ಯೋತಿ ಯೋಜನೆಯಡಿ ಸಬ್ಸಿಡಿ ಹಣ ಬಿಡುಗಡೆಯಾದ ಮತ್ತು ಹಣ ಬಿಡುಗಡೆಯಾಗಬೇಕಾಗಿರುವ ಫಲಾನುಭವಿಗಳ ಸಂಖ್ಯೆ ವಿವರಗಳು:**

| ಕಂಪನಿ | ಜಿಲ್ಲೆ | ಅಮೃತ ಜ್ಯೋತಿ ಯೋಜನೆಯಡಿ ಬಿಪಿಎಲ್ ಕಾರ್ಡ್‌ದಾರರಿಗೆ ಸಬ್ಸಿಡಿ ಹಣ ಬಿಡುಗಡೆಯಾದ ಫಲಾನುಭವಿಗಳ ಸಂಖ್ಯೆ | ಅಮೃತ ಜ್ಯೋತಿ ಯೋಜನೆಯಡಿ ಬಿಪಿಎಲ್ ಕಾರ್ಡ್‌ದಾರರಿಗೆ ಸಬ್ಸಿಡಿ ಹಣ ಬಿಡುಗಡೆಯಾಗ ಬೇಕಾಗಿರುವ ಫಲಾನುಭವಿಗಳ ಸಂಖ್ಯೆ |
|---|---|---|---|
| ಬೆಸ್ಕಾಂ | ಬೆಂಗಳೂರು ನಗರ | 1232 | 947 |
| | ಕೋಲಾರ | 1730 | 4221 |
| | ಚಿಕ್ಕಬಳ್ಳಾಪುರ | 2695 | 790 |
| | ಬೆಂಗಳೂರು ಗ್ರಾಮಾಂತರ | 2817 | 2131 |
| | ರಾಮನಗರ | 2677 | 2943 |
| | ತುಮಕೂರು | 6948 | 0 |
| | ಚಿತ್ರದುರ್ಗ | 2894 | 3107 |
| | ದಾವಣಗೆರೆ | 1081 | 3057 |
| | ಬೆಸ್ಕಾಂ ಒಟ್ಟು | **22074** | **17196** |